ನಂದುವನ್ನು ತಳ್ಳು ಕುರ್ಚಿಯಲ್ಲಿ ಕುಳ್ಳಿರಿಸಲು ನೆರವಾದೆವು. ಸಂಧ್ಯಾ ತಡೆಯಲಾರದೆ ಕೇಳಿದಳು. 'ಆಂಟಿ, ವಿಕಲಾಂಗರಿಗೆ, ವಿಶೇಷ ಚೇತನರಿಗೆ, ಸ್ಪ್ಯಾಸ್ಟಿಕ್ ಸೊಸೈಟಿಯವರು ವಿಶೇಷ ಗೃಹಗಳನ್ನೇ ಕಟ್ಟಿದ್ದಾರೆ. ಆಯಾಗಳನ್ನು ನೇಮಿಸಿ ನೋಡಿಕೊಳ್ತಾರೆ. ನೀವ್ಯಾಕೆ ನಂದುವನ್ನು ಅಲ್ಲಿಗೆ ಕಳುಹಿಸಬಾರದು? ಈ ವಯಸ್ಸಿನಲ್ಲಿ ನೀವೇ ಏಕೆ ಕಷ್ಟಪಡ್ತೀರಿ?'

'ನಿಜಾಮ್ಮ... ನಂದೂ ಚಿಕ್ಕವನಾಗಿದ್ದಾಗ ನಾವು ಹೈದರಾಬಾದ್‌ನಲ್ಲಿದ್ದೆವು. ಆಗ ಅದನ್ನೂ ಪ್ರಯತ್ನಿಸಿ ನೋಡಿದ್ದೇನೆ. ಆದರೆ ಅದೇಕೋ ನಂದುವಿಗೆ ಅದು ಸರಿಹೊಂದಲಿಲ್ಲ. ಬೇರೆ ಮಕ್ಕಳನ್ನೆಲ್ಲಾ ಹೊಡೆದು ಬಡಿದು ಮಾಡಿಬಿಡುತ್ತಿದ್ದ. ಮನೇಲಿ ಒಬ್ಬನೇ ಇರುವಾಗ ಬುದ್ಧಿ ಸ್ವಾಧೀನವಾಗಿರುತ್ತೆ. ತನ್ನ ಪಾಡಿಗೆ ತಾನು ಏನಾದರೂ ಆಟವಾಡಿಕೊಳ್ತಾನೆ. ಆದರೆ ಜನರ ಮಧ್ಯೆ ಇರುವಾಗ ತುಂಬಾ ವ್ಯಗ್ರನಾಗಿ ಬಿಡುತ್ತಿದ್ದ. ಹಾಗಾಗಿ ನಾವು ಅವನನ್ನು ಮನೆಗೆ ಕರೆತಂದುಬಿಟ್ವೆವು. ಅಂದಿನಿಂದ ನಾವೇ ನೋಡಿಕೊಳ್ತೇವೆ.

'ಸಂಧ್ಯಾ! ಭಗವಂತ ಎಷ್ಟೋ ಹೆಣ್ಣುಮಕ್ಕಳ ನಡುವೆ, ನನ್ನನ್ನು ಆಯ್ಕೆ ಮಾಡಿ ಇಂತಹ ಮಗುವನ್ನು ನೀಡಿದ್ದಾನೆ. ಸಾಮಾನ್ಯ ಮಕ್ಕಳಾದರೆ ಯಾವ ಹೆಣ್ಣುಮಗಳಾದರೂ ನೋಡಿಕೊಳ್ಳಬಹುದು. ಆದರೆ, ಇಂತಹ ಮಕ್ಕಳನ್ನು ಕಾಪಾಡಲು ವಿಶೇಷ ತಾಯಿಯೇ ಬೇಕಲ್ಲವೆ? ಅಂತಹ ವಿಶೇಷತೆ ನನ್ನಲ್ಲಿದೆ ಎಂದಲ್ಲವೆ ಆ ದೇವರು ನನಗೆ ಈ ಗುರುತರ ಜವಾಬ್ದಾರಿ ಕೊಟ್ಟಿರುವುದು? ಇದಕ್ಕೆ ಆ ಭಗವಂತನಿಗೆ ಧನ್ಯವಾದ ತಿಳಿಸಬೇಡವೆ? ಈ ಜವಾಬ್ದಾರಿಯನ್ನು ಸಂತೋಷದಿಂದ, ಮುತುವರ್ಜಿಯಿಂದ ನಿತ್ಯವೂ ನಾನೇ ಮಾಡುತ್ತೇನೆ. ಅದರಲ್ಲಿ ನನಗೊಂದು ತೃಪ್ತಿಯಿದೆ... ಆನಂದವಿದೆ. ನಂದೂ ಹುಟ್ಟಿದಾಗ ವೈದ್ಯರು ಹೇಳಿದ್ದರು. ಈ ಮಗು ಹದಿನೈದು ವರ್ಷ ಬದುಕಿದರೆ ಹೆಚ್ಚು ಅಂತ. ನನ್ನ ಪ್ರೀತಿ, ಆರೈಕೆಗಳಲ್ಲಿ ಅವನು ಇನ್ನೂ ಹದಿನೈದು ವರ್ಷ ಬದುಕಿದ್ದಾನೆ. ಕಳೆದ ವಾರ ಅವನ ಮೂವತ್ತನೆಯ ಹುಟ್ಟುಹಬ್ಬಕ್ಕೆ ಸ್ಪ್ಯಾಸ್ಟಿಕ್ ಸೊಸೈಟಿಯ ಮಕ್ಕಳಿಗೆಲ್ಲಾ ಅವನ ಕೈಯಲ್ಲೇ ಕೇಕ್ ಹಂಚಿಸಿದೆವು. ಇವನ ಋಣ ಇನ್ನೆಷ್ಟು ದಿನ ಇದೆಯೋ ಕಾಣೆ!' ಎಂದರು ಜಾನಕಮ್ಮ.

ನಂದುವನ್ನು ಕಂಡಾಗಲಿಂದ ನಮ್ಮ ಮನಸ್ಸು ತುಂಬಾ ಖಿನ್ನವಾಗಿತ್ತು. ಮತ್ತೊಮ್ಮೆ ಬರುವುದಾಗಿ ಜಾನಕಮ್ಮನಿಗೆ ಹೇಳಿ ಮನೆಗೆ ಹಿಂತಿರುಗಿದೆವು. 'ಎದೆಯಲ್ಲಿ ಇಷ್ಟೊಂದು ದುಃಖವಿಟ್ಟುಕೊಂಡ ಜಾನಕಮ್ಮ ಹೇಗೆ ಎಲ್ಲರೊಂದಿಗೂ ಅಷ್ಟು ಉತ್ಸಾಹದಿಂದ, ಲವಲವಿಕೆಯಿಂದ ನಗುನಗುತ್ತಾ ಬೆರೆಯುತ್ತಾರೆ... ಅಳುತ್ತಾ ಒಂದೆಡೆ ಕೂರಬೇಕಾದವರು, ಹೇಗೆ ಇಷ್ಟು ಹುರುಪಿನಿಂದ ಎಲ್ಲಾ ಕೆಲಸ ಮಾಡುತ್ತಾರೆ ಎನ್ನುವುದೇ ನನಗೆ ಅಚ್ಚರಿ ಸಂಧ್ಯಾ!' ಎಂದೆ.

'ಕಷ್ಟ ಕೊಟ್ಟ ದೇವರೇ, ಅವರಿಗೆ ವಿಶೇಷ ಶಕ್ತಿಯನ್ನೂ ಸ್ಥೈರ್ಯವನ್ನೂ ಕೊಡುತ್ತಾನೆ ಅಮ್ಮ! ಇಲ್ಲವಾದರೆ ಆಕೆ ಒಬ್ಬಳೇ ಹೇಗಮ್ಮ ಇಷ್ಟೆಲ್ಲಾ



ನಿಭಾಯಿಸಲು ಸಾಧ್ಯ?' ಸಂಧ್ಯಾ ದನಿಗೂಡಿಸಿದಳು.

***

ಸಂಧ್ಯಾ ಹೊರಡಲು ಇನ್ನೊಂದು ವಾರವಿದೆ ಎನ್ನುವಾಗ, ಅವಳೇ ಹೇಳಿದಳು, 'ಅಮ್ಮಾ, ಜಾನಕಮ್ಮ ಎರಡು ದಿನದಿಂದ ನಮ್ಮ ಮನೆಗೆ ಬಂದೇ ಇಲ್ಲ. ನಂದೂಗೇನಾದ್ರೂ ಆರೋಗ್ಯ ಸರಿಯಿಲ್ಲವೇನೋ. ಬಾರಮ್ಮ... ನಾವೇ ಹೋಗಿ ನೋಡಿಬರೋಣ'.

ನಾವು ಅವರ ಮನೆಯೊಳಗೆ ಹೋದಾಗ ಜಾನಕಮ್ಮ ಕೋಣೆಯಿಂದ ಹೊರಬರುತ್ತಿದ್ದರು. 'ಬನ್ನಿ ಸರೋಜಮ್ಮ. ಭಗವಂತ ನನ್ನ ಮೊರೆ ಕೇಳಿಬಿಟ್ಟ. ನಮ್ಮ ನಂದೂ ಹೋಗಿ ಸೇರಿಬಿಟ್ಟ! ನನಗೀಗ ನಿಶ್ಚಿಂತೆ!'

'ಮಗ ಅಮೆರಿಕ ತಲುಪಿದ' ಎನ್ನುವಂತೆ ಹೇಳಿದ ಜಾನಕಮ್ಮನವರನ್ನು ಅಚ್ಚರಿಯಿಂದ ನೋಡಿದೆ.

ಕೋಣೆಯೊಳಗೆ ಹಾಸಿಗೆಯ ಮೇಲೆ ನಂದಕಿಶೋರ ಕಣ್ಮುಚ್ಚಿ ಮಲಗಿದ್ದ. ಅವನ ಕೊರಳಿಗೆ ಹಾರ ಹಾಕಲಾಗಿತ್ತು. ಕಿಟಕಿ ಗೂಡಿನಲ್ಲಿ ಅಗರಬತ್ತಿಯ ಸುವಾಸನೆ... ಸಣ್ಣದಾಗಿ ಎಂ.ಎಸ್. ಸುಬ್ಬುಲಕ್ಷ್ಮಿಯವರ ದನಿಯ 'ಭಜ ಗೋವಿಂದಂ' ಕೇಳಿಬರುತ್ತಿತ್ತು.

'ನಿಮ್ಮನ್ನು ನೀವೇ ಸಂತೈಸಿಕೊಳ್ಳಬೇಕು ಆಂಟಿ! ಮಗನನ್ನು ಎಷ್ಟು ಚೆನ್ನಾಗಿ ನೋಡಿಕೊಳ್ತಿದ್ರಿ! ಹದಿನೈದು ವರ್ಷ ಹೆಚ್ಚಾಗಿಯೇ ಬದುಕಿದ್ದನಲ್ಲ. ನಿಮ್ಮ ಆರೈಕೆಯಿಂದ' ಎಂದು ಅವರ ಕೈ ಹಿಡಿದು ಹೇಳಿದಳು ಸಂಧ್ಯಾ.

ನನ್ನ ಬಾಯಿಂದ ಮಾತೇ ಹೊರಡಲಿಲ್ಲ. ಅವರ ಸ್ಥಾನದಲ್ಲಿ ನನ್ನನ್ನು ಊಹಿಸಿಕೊಂಡಾಗ, ನನ್ನ ಕಣ್ಣುಗಳು ಕೊಳಗಳಾಗಿದ್ದವು.

'ನೋಡು ಸಂಧ್ಯಾ... ಪ್ರತಿಯೊಬ್ಬ ವಿಶೇಷ ಮಕ್ಕಳ ತಾಯಿಯೂ ಆಶಿಸುವುದು ಇದನ್ನೇ... ನನ್ನ ಕಣ್ಣೆದುರಿಗೇ ಮಗು ಕಣ್ಮುಚ್ಚಲಿ ಎಂದು. ನನ್ನದೂ ಅಂಥದ್ದೇ ಒಂದು ಕಲ್ಲುಹೃದಯ! ನನ್ನ ಕಾಲಾನಂತರ ನನ್ನ ಈ ಮಗುವನ್ನು ಯಾರು ಹೀಗೆ ಅಕ್ಕರೆಯಿಂದ ನೋಡಿಕೊಳ್ತಾರೆ ಹೇಳು? ಅವನು ನನ್ನ ಕಣ್ಣೆದುರಿಗೇ ದೇವರ ಪಾದ ಸೇರಿಬಿಟ್ಟದ್ದು ನನಗೆ ನೆಮ್ಮದಿ...

ಇದಕ್ಕಾಗಿ ಆ ಭಗವಂತನಿಗೆ ಧನ್ಯವಾದ ಹೇಳುತ್ತೇನೆ' ಎಂದರು ಆ ಅಪೂರ್ವ ಮಾತೆ!

ಪ್ರತಿಕ್ರಿಯಿಸಿ: feedback@sudha.co.in